**ವಿಕಾಶ್ ಕುಮಾರ್ ವಿಕಾಶ್,** ಭಾ.ಪೋ.ಸೇ
ವ್ಯವಸ್ಥಾಪಕ ನಿರ್ದೇಶಕರು

MSIL
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**Mysore Sales International Limited**
(A Government of Karnataka Undertaking)
MSIL House, 36, Cunningham Road
Bengaluru - 560 052.
Phone : 91 80 22264021 - 25
Email : msil@msilonline.com
: msilho@gmail.com
Website : www.msilonline.com
CIN : U85110KA1966SGC001612

<u>**ಪತ್ರಿಕಾ ಪ್ರಕಟಣೆ**</u>

ಕರ್ನಾಟಕ ರಾಜ್ಯ ಸರ್ಕಾರದ ಸಂಸ್ಥೆಯಾದ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಸಂಸ್ಥೆಯು ಯಶಸ್ವಿಯಾಗಿ 56 ವರ್ಷಗಳನ್ನು ಪೂರೈಸಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಸಂಸ್ಥೆಯು ಚಿಲ್ಲರೆ ಮದ್ಯ ಮಾರಾಟ, ಚಿಟ್ ಫಂಡ್, ವಿದ್ಯಾ ಮತ್ತು ಲೇಖಕ್ ಬ್ರಾಂಡ್ ನ ನೋಟ್ ಪುಸ್ತಕಗಳು ಮತ್ತು ಲೇಖನಸಾಮಗ್ರಿ, ಸೋಲಾರ್ ವಾಟರ್ ಹೀಟರ್, ಪ್ರವಾಸ ಮತ್ತು ಪ್ರಯಾಣ, ಜನರಿಕ್ ಔಷಧಿ ಹಾಗೂ ಇನ್ನಿತರೇ ಉತ್ಪನ್ನಗಳ ಮಾರಾಟ ಮತ್ತು ಸೇವೆಗಳಲ್ಲಿ ತೊಡಗಿಸಿಕೊಂಡಿದೆ.

ಕರ್ನಾಟಕ ರಾಜ್ಯ ಸರ್ಕಾರವು ಸಾರಾಯಿ ಮಾರಾಟವನ್ನು ನಿಷೇಧಿಸಿದ ನಂತರ ಅಕ್ರಮ ಮದ್ಯ ಮಾರಾಟ ಹೆಚ್ಚಾದ ಸಂದರ್ಭದಲ್ಲಿ ಎಂಎಸ್ಐಎಲ್ ಸಂಸ್ಥೆಗೆ ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ರಾಜ್ಯಾದ್ಯಂತ ತೆರೆಯಲು ಸರ್ಕಾರದಿಂದ ಅನುಮತಿ ನೀಡಲಾಗಿದ್ದು, ಪ್ರಸ್ತುತ **979** ಎಂಎಸ್ಐಎಲ್ ಸಿಎಲ್-(11ಸಿ) ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಮದ್ಯವನ್ನು ಎಂಆರ್‌ಪಿ ದರದಲ್ಲಿ ಒದಗಿಸುವ ಉದ್ದೇಶ ಎಂಎಸ್ಐಎಲ್ ಸಂಸ್ಥೆಯದ್ದಾಗಿದೆ. ಪಾನೀಯ ವಿಭಾಗದಿಂದ 2021-22 ನೇ ಸಾಲಿಗೆ ರೂ.**2399** ಕೋಟಿ ವಹಿವಾಟು ನಡೆಸಲಾಗಿದೆ.

ಅನಧಿಕೃತ ಚಿಟ್ ಕಂಪನಿಗಳಿಂದ ಸಾರ್ವಜನಿಕರು ಮೋಸ ಹೋಗುವುದನ್ನು ತಪ್ಪಿಸಲು ಎಂಎಸ್ಐಎಲ್ ಸಂಸ್ಥೆಯು ಚಿಟ್ ಫಂಡ್ ವ್ಯವಹಾರವನ್ನು ನಡೆಸುತ್ತಿದ್ದು, ಪ್ರಸ್ತುತ **26** ಚಿಟ್ ಶಾಖೆಗಳನ್ನು ಹೊಂದಿದ್ದು **2** ಲಕ್ಷಕ್ಕೂ ಅಧಿಕ ಚಂದಾದಾರರು ಈವರೆಗೂ ಚಿಟ್ ಫಂಡ್ ಅನುಕೂಲವನ್ನು ಪಡೆದಿರುತ್ತಾರೆ. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿಯೂ ಕೂಡ ಚಿಟ್ ಫಂಡ್ ಶಾಖೆಗಳನ್ನು ತೆರೆಯಲು ಸಂಸ್ಥೆಯು ಉದ್ದೇಶಿಸಿದೆ. ಚಿಟ್‌ಫಂಡ್ ವಿಭಾಗದಿಂದ 2021-22 ನೇ ಸಾಲಿಗೆ ರೂ.**308** ಕೋಟಿ ವಹಿವಾಟು ನಡೆಸಲಾಗಿದೆ.

ಎಂಎಸ್ಐಎಲ್ ಸಂಸ್ಥೆಯು ಸುಮಾರು 5 ದಶಕಗಳಿಂದ ಅತ್ಯುತ್ತಮ ಗುಣಮಟ್ಟದ ವಿದ್ಯಾ ಹಾಗೂ ಲೇಖಕ್ ನೋಟ್ ಪುಸ್ತಕಗಳನ್ನು ವಿದ್ಯಾರ್ಥಿ ವೃಂದಕ್ಕೆ ಒದಗಿಸುತ್ತಾ ಬಂದಿದೆ. ನೋಟ್ ಪುಸ್ತಕಗಳ ಉತ್ಪಾಧನೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಂಸ್ಥೆಯು ಉತ್ತೇಜನ ನೀಡುತ್ತಿದ್ದು ಹಲವಾರು ಜನರಿಗೆ ಪರೋಕ್ಷವಾಗಿ ಉದ್ಯೋಗವನ್ನು ಒದಗಿಸಲಾಗಿರುತ್ತದೆ. ಕಾಗದ ವಿಭಾಗದಿಂದ 2021-22 ನೇ ಸಾಲಿಗೆ ರೂ.**80** ಕೋಟಿ ವಹಿವಾಟು ನಡೆಸಲಾಗಿದೆ.

ನವೀಕರಿಸಬಹುದಾದ ಇಂದನದ ಬಳಕೆಗೆ ಸರ್ಕಾರವು ಉತ್ತೇಜನ ನೀಡುತ್ತಿರುವ ಹಿನ್ನೆಲೆಯಲ್ಲಿ ಎಂಎಸ್ಐಎಲ್ ಸಂಸ್ಥೆಯು ಸೋಲಾರ್ ಉತ್ಪನ್ನಗಳನ್ನು ಕೂಡ ಮಾರಾಟ ಮಾಡುತ್ತಿದ್ದು, 2021-22ನೇ ಸಾಲಿನಲ್ಲಿ ರೂ.**92** ಕೋಟಿ ವಹಿವಾಟು ನಡೆಸಲಾಗಿದೆ.

ಎಂಎಸ್ಐಎಲ್ ಸಂಸ್ಥೆಯು ಪ್ರಧಾನ ಮಂತ್ರಿ ಜನೌಷಧಿ ಯೋಜನೆಯಲ್ಲಿಯೂ ಕೂಡ ಭಾಗಿಯಾಗಿದ್ದು ಎಲ್ಲಾ ವರ್ಗದ ಜನರಿಗೆ ಅತಿ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಜನರಿಕ್ ಔಷಧಿಯನ್ನು ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತ **87** ಜನೌಷಧಿ ಮಳಿಗೆಗಳನ್ನು ವಿವಿಧ ಸರ್ಕಾರಿ ಆಸ್ಪತ್ರೆಗಳ ಆವರಣಗಳಲ್ಲಿ ಪ್ರಾರಂಭಿಸಿ ಕಾರ್ಯನಿರ್ವಹಿಸಲಾಗುತ್ತಿದೆ. ಫಾರ್ಮ ವಿಭಾಗದಲ್ಲಿ 2021-22 ನೇ ಸಾಲಿಗೆ ರೂ.**10.81** ಕೋಟಿ ವಹಿವಾಟು ನಡೆಸಲಾಗಿದ್ದು, ಈ ವಿಭಾಗವು ಪ್ರಾರಂಭವಾದಾಗಿನಿಂದ ಪ್ರಥಮ ಭಾರಿಗೆ ರೂ.**1.47** ಕೋಟಿ ಲಾಭವನ್ನು ಗಳಿಸಲಾಗಿದೆ.

ಪ್ರವಾಸ ಮತ್ತು ಪ್ರಯಾಣ ಉದ್ಯಮದಲ್ಲಿ ಇರುವ ಅವಕಾಶಗಳನ್ನು ಮನಗಂಡು ಸಂಸ್ಥೆಯು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರವಾಸ ಪ್ಯಾಕೇಜ್‌ಗಳನ್ನು ಎಲ್ಲಾ ವರ್ಗದ ಜನರಿಗೆ ಕೈಗೆಟುಕುವ ದರಗಳಲ್ಲಿ ನಡೆಸುತ್ತಿದೆ.

MSIL

ಒಟ್ಟಾರೆ ಎಂಎಸ್‌ಐಎಲ್ ಸಂಸ್ಥೆಯು 2021-22 ನೇ ಸಾಲಿನಲ್ಲಿ ರೂ.**2901** ಕೋಟಿಗಳ ವಹಿವಾಟು ನಡೆಸಿದ್ದು ರೂ.**91.01** ಕೋಟಿ ನಿವ್ವಳ ಲಾಭ ಗಳಿಸಲಾಗಿದೆ. 2022-23ನೇ ಹಣಕಾಸಿನ ವರ್ಷಕ್ಕೆ ರೂ.**3350.44** ಕೋಟಿಗಳಷ್ಟು ವಹಿವಾಟು ನಡೆಸುವ ಗುರಿ ಹೊಂದಲಾಗಿದೆ. ಖಾಸಗಿ ಮದ್ಯ ಮಾರಾಟ ಮಳಿಗೆಗಳಿಗೆ ಪೈಪೋಟಿ ನೀಡಲು ಮೊದಲ ಹಂತದಲ್ಲಿ **200** ಮದ್ಯ ಮಳಿಗೆಗಳನ್ನು ಅತ್ಯುತ್ತಮ ವಿನ್ಯಾಸದೊಂದಿಗೆ ಮೇಲ್ದರ್ಜೆಗೆ ಏರಿಸಲು ಉದ್ದೇಶಿಸಲಾಗಿದೆ.

**ಸಂಸ್ಥೆಯ ಕಾರ್ಯಕ್ಷಮತೆಯನ್ನು ಗುರುತಿಸಿ CEO Global Business Magazine ನ ಭಾರತ ಮತ್ತು ಏಷ್ಯಾ ವಿಭಾಗದಲ್ಲಿ ಎಂಎಸ್‌ಐಎಲ್ ಸಂಸ್ಥೆಯ ಬಗ್ಗೆ ವಿಶೇಷ ಲೇಖನವನ್ನು ಪ್ರಕಟಿಸಲಾಗಿದೆ. ಇದಲ್ಲದೆ ಸಂಸ್ಥೆಯು ಸಾರ್ವಜನಿಕರಿಗೆ ಚಿಟ್ ಫಂಡ್ ವಿಭಾಗದ ಮುಖಾಂತರ ನೀಡುತ್ತಿರುವ ಸೇವೆಯನ್ನು ಗುರುತಿಸಿ SKOCH 2022 ಪ್ರಶಸ್ತಿಯನ್ನು ನೀಡಲಾಗಿದೆ. ಇದರೊಂದಿಗೆ ಎಂಎಸ್‌ಐಎಲ್‌ನ ಕಾರ್ಯಕ್ಷಮತೆಯನ್ನು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರಿಯಮಟ್ಟದಲ್ಲಿ ಗುರುತಿಸಲಾಗಿದೆ.**

**ರಷ್ಯಾ ಹಾಗೂ ಯುಕ್ರೇನ್ ನಡುವಿನ ಯುದ್ಧದ ಸಂದರ್ಭದಲ್ಲಿ ಯುಕ್ರೇನ್ ದೇಶದಲ್ಲಿ ಸಿಲುಕಿದ್ದ ಕರ್ನಾಟಕದ 554 ವಿದ್ಯಾರ್ಥಿಗಳನ್ನು ಮಾನ್ಯ ಮುಖ್ಯಮಂತ್ರಿಗಳ ಸೂಚನೆಯ ಮೇರೆಗೆ ಈ ವಿದ್ಯಾರ್ಥಿಗಳು ಭಾರತಕ್ಕೆ ಹಿಂದಿರುಗಿದ ಮೇಲೆ ತಮ್ಮ ತಮ್ಮ ಸ್ವಂತ ಸ್ಥಳಗಳಿಗೆ ತಲುಪಿಸುವ ಕಾರ್ಯವನ್ನು ಎಂಎಸ್‌ಐಎಲ್ ಸಂಸ್ಥೆಯು ತನ್ನ ಪ್ರವಾಸ ಮತ್ತು ಪ್ರಯಾಣ ವಿಭಾಗದ ಮೂಲಕ ಯಶಸ್ವಿಯಾಗಿ ನಿರ್ವಹಿಸಿದೆ. ಈ ಕಾರ್ಯಕ್ಕೆ ಒಟ್ಟು ರೂ.59,18,050/- ಗಳಷ್ಟು ವೆಚ್ಚವಾಗಿದ್ದು ಈ ಸಂಪೂರ್ಣ ಹಣವನ್ನು ಸಾಮಾಜಿಕ ಕಳಕಳಿಯ ದೃಷ್ಟಿಯಿಂದ ಎಂಎಸ್‌ಐಎಲ್ ಸಂಸ್ಥೆಯೇ ಭರಿಸಿದೆ.**

ಇದಲ್ಲದೆ ಕೋವಿಡ್ 19 ಸಾಂಕ್ರಮಿಕ ರೋಗ ಹರಡುವ ಸಂದರ್ಭದಲ್ಲಿ ಆಕ್ಸಿಜನ್ ಕಾನ್ಸಂಟ್ರೇಟರ್ಸ್, ಮಾಸ್ಕ, ಕೈ ಗವಸು, ಸ್ಯಾನಿಟೈಸರ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಉಚಿತವಾಗಿ ವಿತರಿಸಲಾಗಿರುವುದರೊಂದಿಗೆ ರೋಗಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಸಾರ್ವಜನಿಕ ಆಸ್ಪತ್ರೆಗೆ ಆಂಬುಲೆನ್ಸ್ ಒದಗಿಸಲಾಗಿದೆ.

ಎಂಎಸ್‌ಐಎಲ್ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ನಡೆಸಿದ ವಹಿವಾಟಿನ ವಿವರಗಳು

(ಕೋಟಿ ರೂ.ಗಳಲ್ಲಿ)

| ಕ್ರ.ಸಂ. | ವರ್ಷ | ವಹಿವಾಟು (ರೂ.) | ಒಟ್ಟು ನಿವ್ವಳ ಲಾಭ (ರೂ) |
|---|---|---|---|
| 1 | 2019-20 | 2270.65 | 42.46 |
| 2 | 2020-21 | 2763.86 | 68.14 |
| 3 | 2021-22 | 2901.24 | 91.01 |
| 4 | 2022-23 | 3350.44 (ಗುರಿ) | 110.00(ಗುರಿ) |

ಎಂಎಸ್‌ಐಎಲ್ ಸಂಸ್ಥೆಯು ಪ್ರಸ್ತುತ ತನ್ನ ಎಲ್ಲಾ ಚಟುವಟಿಕೆಗಳಲ್ಲಿ ಅತ್ಯುತ್ತಮ ಪ್ರಗತಿಯನ್ನು ಸಾಧಿಸುತ್ತಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ವಿವಿಧ ಉತ್ಪನ್ನಗಳು ಹಾಗೂ ಸೇವೆಗಳನ್ನು ಮಾರುಕಟ್ಟೆಗೆ ಪರಿಚಯಿಸುವುದರೊಂದಿಗೆ ಖಾಸಗಿ ಮಾರುಕಟ್ಟೆಗೆ ಪೈಪೋಟಿ ನೀಡಿ ತನ್ನ ಕಾರ್ಯ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿಕೊಂಡು ಸಮಾಜದ ಎಲ್ಲಾ ವರ್ಗದ ಗ್ರಾಹಕರಿಗೆ ಇನ್ನೂ ಅತ್ಯುತ್ತಮ ಸೇವೆಯನ್ನು ಒದಗಿಸುವ ಉದ್ದೇಶ ಹೊಂದಿರುತ್ತದೆ. ಈ ಎಲ್ಲಾ ಚಟುವಟಿಕೆಗಳೊಂದಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ವಿಶೇಷವಾಗಿ ಗ್ರಾಮಾಂತರ ಮಟ್ಟದಲ್ಲಿ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸೃಷ್ಟಿ ಮಾಡುವಲ್ಲಿ ಯಶಸ್ವಿಯಾಗಿದೆ.

**(ವಿಕಾಶ್ ಕುಮಾರ್ ವಿಕಾಶ್,** IPS)

ವ್ಯವಸ್ಥಾಪಕ ನಿರ್ದೇಶಕರು